ಸಿ.ಸಿ.1599/2019 ಪಿಡಬ್ಲ್ಯೂ- **1**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 05.11.2024</u>**

**<u>ಮುಂದುವರಿದ ಪಾಟೀ ಸವಾಲು : ಶ್ರೀ.ಆರ್ ಆರ್ ವಕೀಲರಿಂದ ಆರೋಪಿ ಪರವಾಗಿ :</u>**

4. ನಾನು ನನ್ನದೇ ಮಾಲಿಕತ್ವದ ಟ್ರಾಕ್ಟರ್ ನ್ನು ಹೊಂದಿರುತ್ತೇನೆ. ಆ ರೀತಿ ಮಳೆ ಕಾಲದಲ್ಲಿ ನನ್ನ ಟ್ರಾಕ್ಟರ್ ಗೆ ಯಾವುದೇ ಕೆಲಸ ಇರುವುದಿಲ್ಲ. ಪ್ರತಿದಿನ 2 ರಿಂದ 3 ಲೋಡ್ ಗೊಬ್ಬರವನ್ನು ಸಾಗಾಟ ಮಾಡುತ್ತೇನೆ. ಆ ರೀತಿ ವರ್ಷಕ್ಕೆ 7 ತಿಂಗಳು ಗೊಬ್ಬರವನ್ನು ಸಾಗಾಟ ಮಾಡುತ್ತೇನೆ. ನಾನು ವರ್ಷದಲ್ಲಿ 7 ತಿಂಗಳ ಕಾಲ ಗೊಬ್ಬರ ಸಾಗಾಟ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೊಬ್ಬರವನ್ನು ಎಲ್ಲಿಗೆ ಸಾಗಾಟ ಮಾಡಿಸುತ್ತಿದ್ದೇನೆ ಎಂದು ಸಾಕ್ಷಿ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1 ಲೋಡ್ ಗೊಬ್ಬರವನ್ನು ಸಾಗಾಟ ಮಾಡಿದರೆ 500-600 ರೂಗಳು ಲಾಭ ಸಿಗುತ್ತದೆ. 1 ಲೋಡ್ ಗೊಬ್ಬರಕ್ಕೆ 5,500/- ರೂಗಳ ಬೆಲೆ ನಿಗದಿ ಮಾಡುತ್ತೇನೆ. ಸದರಿ ಗೊಬ್ಬರವನ್ನು ನಾನು ಬೇರೆಯವರಿಂದ ಖರೀದಿ ಮಾಡುತ್ತೇನೆ. ಆ ರೀತಿ 3,500/- ರೂಗಳಿಗೆ ಖರೀದಿ ಮಾಡುತ್ತೇನೆ.

2. ಆರೋಪಿಗೆ ನಾನು ಹಣ ಕೊಟ್ಟಿದ್ದ ದಿನಾಂಕ ಹೇಳಲು ಆಗುವುದಿಲ್ಲ ಆದರೆ ಬುಕ್ ನಲ್ಲಿ ಇರುತ್ತದೆ. ಸದರಿ ಪುಸ್ತಕವನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆರೋಪಿಗೆ ನಾನು ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಸದರಿ ಹಣವನ್ನು 3 ಜನರ ಬಳಿ ಪಡೆದುಕೊಂಡು ಮತ್ತು ಸ್ತ್ರೀ ಶಕ್ತಿ ಸಂಘದಿಂದ 1 ಲಕ್ಷ ಹಣವನ್ನು ಪಡೆದುಕೊಂಡು ಆರೋಪಿಗೆ ಕೊಟ್ಟಿರುತ್ತೇನೆ. ಆ ರೀತಿ ನಾನು ದೇವನಹಳ್ಳಿಯ ಕಿಟ್ಟಣ್ಣ ರವರ ಬಳಿ 50 ಸಾವಿರ, ಕುಂದಾಣದ ಹನುಮಂತ ಗೌಡ ರ ಬಳಿ 1,50,000/- ರೂಗಳು ಮತ್ತು ಬ್ಯಾಡರಹಳ್ಳಿಯ ರಾಜು ರವರ ಬಳಿ 1 ಲಕ್ಷ ಹಣ ಪಡೆದು ಆರೋಪಿಗೆ ಕೊಟ್ಟಿರುತ್ತೇನೆ.

3. ಆರೋಪಿಗೆ ಒಂದೇ ಬಾರಿಗೇ ಹಣವನ್ನು ನೀಡಿರುತ್ತೇನೆ. ಆ ರೀತಿ 20, 50, 100 ಹಾಗೂ 500 ರೂಗಳ ಮುಖ ಬೆಲೆಯ ಹಣವನ್ನು ನೀಡಿರುತ್ತೇನೆ. ಆ ರೀತಿ 20 ರೂಗಳ ಮುಖ ಬೆಲೆಯ ಒಟ್ಟು 5000 ಸಾವಿರ ಹಣ, 50 ರೂಗಳ 10 ಸಾವಿರ ಹಣ, 100 ರೂಗಳ 50 ಸಾವಿರ ಹಣ ಮತ್ತು 500 ರೂಗಳ 3,50,000/- ಹಣವನ್ನು ಕೊಟ್ಟಿರುತ್ತೇನೆ. ಇದನ್ನು ಹೊರತು ಪಡಿಸಿ ಆರೋಪಿಗೆ ನಾನು ಬೇರೆ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ಹಣ ಕೊಟ್ಟ ಸಂದರ್ಬದಲ್ಲಿ ಆರೋಪಿಯ ಅಳಿಯ ಸುರೇಶ್, ಸುರೇಶ್ ರವರ ಭಾವ, ಸುರೇಶ್ ರವರ ಅಣ್ಣ ನರಸಿಂಹ ಮತ್ತು ಸುರೇಶ್ ರವರ ತಂದೆ ನರಸಿಂಹಪ್ಪ ರವರು

ಇದ್ದರು. ನಾನು ಆರೋಪಿಗೆ ಯಾವುದೇ ಹಣ ಕೊಡದೇ ಇದ್ದರೂ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

4. ಆರೋಪಿಗೆ ಓದಲು ಬರೆಯಲು ಬರೆಯದೇ ಇರುವ ಕಾರಣದಿಂದ ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಮಗಳಿಗೆ ಮದುವೆ ಮಾಡುವ ಉದ್ದೇಶಕ್ಕಾಗಿ ನನ್ನ ಬಳಿ ಹಣ ಪಡೆದುಕೊಂಡಿದ್ದರು. ನಾನು ಆರೋಪಿ ಮಗಳ ಮದುವೆಗೆ ಹೋಗಿರುವುದಿಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**

ಸಿ.ಸಿ.1599/2019 ಪಿಡಬ್ಲ್ಯೂ- **1**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 12.01.2024</u>**

**<u>ಮುಂದುವರಿದ ಪಾಟೀ ಸವಾಲು ಃ ಶ್ರೀ.ಬಿ ಎಮ್ ಜಿ ವಕೀಲರಿಂದ ಆರೋಪಿ ಪರವಾಗಿ ಃ</u>**

1. ಈ ಪ್ರಕರಣವನ್ನು ದಾಖಲಿಸುವ ಮೊದಲು ಸಿಸಿ.558/2017 ದಾಖಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣ ವನ್ನು ಹೆಚ್ಚುವರಿ ಸಿವಿಲ್ ನ್ಯಾಯಾಲಯ ದೇವನಹಳ್ಳಿ ವಾಪಸ್ಸು ಮಾಡಿತು ಎಂದರೆ ಸರಿ. ದಿಃ25.09.2018 ರಿಂದ 30 ದಿನಗಳ ಒಳಗಾಗಿ ಈ ಪ್ರಕರಣ ದಾಖಲಿಸಬೇಕೆಂದ ಆದೇಶ ಆಗಿತ್ತು ಎಂದರೆ ಸಾಕ್ಷಿ ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಿಃ25.11.2018 ರಂದು ಸಲ್ಲಿಸಿದ್ದೇನೆ ಎಂದರೆ ಸರಿ. ಈ ಪ್ರಕರಣವನ್ನು 30 ದಿನಗಳ ಒಳಗಾಗಿ ನ್ಯಾಯಾಲಯದ ಆದೇಶದಂತೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ವಿಳಂಬ ಆದ ಬಗ್ಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಗೊತ್ತಿದೆ ಎಂದು ನುಡಿಯುತ್ತಾರೆ. ನಮ್ಮ ವಕೀಲರು ಈ ಪ್ರಕರಣಗದಲ್ಲಿ ಸಲ್ಲಿಸಿರುವ ಅರ್ಜಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆ ರೀತಿ ಕಾಲ ವಿಳಂಬದ ಬಗ್ಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣ ಈ ಪ್ರಕರಣ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿ ನನಗೆ ಯಾವುದೇ ರೀತಿಯಿಂದಲೂ ಪರಿಚಯ ಇರುವುದಿಲ್ಲ ಸಾಕ್ಷಿ ಮುಂದುವರಿದು ಅವರ ಅಳಿಯ ಪರಿಚಯ ಎಂದು ನುಡಿಯುತ್ತಾರೆ. ಆರೋಪಿ ಅಂಗಡ್ ಎಂಬ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ಆರೋಪಿಯ ಮನೆಗೆ ಹೋಗಿರುವುದಿಲ್ಲ ಎಂದರ ಸರಿ. ಅದೇ ರೀತಿ ಆರೋಪಿ ನಮ್ಮ ಮನೆಗೆ ಬಂದಿರುವುದಿಲ್ಲ ಎಂದರೆ ಸರಿ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಯ ಮನೆಯಲ್ಲಿ ಯಾರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ. ಆ ರೀತಿ ನಾನು ಟ್ರಾಕ್ಟರ್ ಮೂಲಕ ಗೊಬ್ಬರವನ್ನು ಸಾಗಾಟ ಮಾಡುವ ಕೆಲಸಕ್ಕೆ ಹೋಗುತ್ತೇನೆ. ನಾನು ಒಂದು ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ. ನಾನು ಸಂಪದಾನೆ ಮಾಡಿದ ಹಣವನ್ನು ನನ್ನ ಖಾತೆಗೆ ಹಾಕುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಯಾಕೆ ಸಂಪದಾನೆ ಮಾಡಿದ ಹಣವನ್ನು ನನ್ನ ಖಾತೆಗೆ ಹಾಕುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಸಂಪಾದನೆ ಮಾಡಿದ ಹಣ ಮನೆ ಮತ್ತು ಟ್ರಾಕ್ಟರ್ ಗೆ ಖರ್ಚಾಗುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಗೊಬ್ಬರ ಸಾಗಾಟ ಮಾಡುವುದನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ.

3. ನಮ್ಮ ಗ್ರಾಮದಲ್ಲಿ ಶ್ರೀರಾಮಯ್ಯ್ಯ ನವರ ಮಗ ಮಂಜುನಾಥ್ ಇದ್ದಾರೆ ಎಂದರೆ ಸರಿ. ಸದರಿಯವರು

ನನಗೆ ಸಂಬಂದಿಕರು. ನಮ್ಮ ಮತ್ತು ಅವರ ನಡುವೆ ಕೇವಲ ಮಾತುಕತೆ ಮಾತ್ರ ಇರುತ್ತದೆ. ಸದರಿಯವರು ಚೀಟಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ, ಆರೋಪಿಗೆ ಸೇರಿದ್ದ ನಿವೇಶನ ನಮ್ಮ ಗ್ರಾಮದಲ್ಲಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಿವೇಶನದ ಬಗ್ಗೆ ಶ್ರೀರಾಮಯ್ಯ ನವರ ಮಗ ಮಂಜುನಾಥ್ ಮತ್ತು ಆರೋಪಿಯ ನಡುವೆ ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸಾದಹಳ್ಳಿಯಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿರುತ್ತಾರೆ. ಆ ರೀತಿ ಆರೋಪಿ ಬ್ಯಾಂಕ್ ಖಾತೆ ತೆರೆಯುವಾಗ ನಾನು ಜೊತೆಗೆ ಹೋಗಿರಲಿಲ್ಲ. ಶ್ರೀರಾಮಯ್ಯ ನವರ ಮಗ ಮಂಜುನಾಥ್ ಆರೋಪಿಯ ಬ್ಯಾಂಕ್ ಖಾತೆ ಮಾಡಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಓದಲು ಬರೆಯಲು ಬರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ಅನಕ್ಷರಸ್ತೆಯಾದ ಕಾರಣ ಓದು ಬರಹ ಬರುವುದಿಲ್ಲ ಮತ್ತು ಬ್ಯಾಂಕ್ ವ್ಯವಹಾರ ಬರುವುದಿಲ್ಲ ಎಂದರೆ ಸಾಕ್ಷಿ ನನಗೆ ಬರುವುದಿಲ್ಲ ಅವರಿಗೆ ಬರುತ್ತದೆ ಎಂದು ಹೇಗೆ ಹೇಳಲಿ ಎಂದು ನುಡಿಯುತ್ತಾರೆ. ಶ್ರೀರಾಮಯ್ಯ ನವರ ಮಗ ಮಂಜುನಾಥ್ ರವರು ಆರೋಪಿ ಹೆಸರಿನಲ್ಲಿ ಬ್ಯಾಂಕ್ ಖಾತೆಯನುನ ಮಾಡಿಸಿ ಆ ಖಾತೆಯಿಂದ 3 ಸಹಿ ಮಾಡಿದ ಚೆಕ್ ಗಳನ್ನು ಪಡೆದುಕೊಂಡು ಆ ಪೈಕಿ 1 ಚೆಕ್ ನ್ನು ನನ್ನ ಕಡೆ ಈ ಪ್ರಕರಣದಲ್ಲಿ ಹಾಕಿಸಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**